ಓ.ಎಸ್ ನಂ.*111/2016*

ಪಿ.ಡಬ್ಲ್ಯು-*1*

ಸಾಕ್ಷಿಯನ್ನು ಇಂದು ದಿನಾಂಕಃ *17.08.2023* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಪಾಟೀ ಸವಾಲು ಪ್ರತಿವಾದಿ ನಂ.೧, ೩ ಮತ್ತು ೪ ರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ಸಾಕ್ಷಿಗೆ ವಾದ ಪತ್ರದ ನಕಾಶೆಯನ್ನು ತೋರಿಸಿ ಅದರಲ್ಲಿ ನೀವು ಮಹಾರಾಷ್ಟ್ರ ರಾಜ್ಯದ ಬಾರ್ಡರ್ ಎಷ್ಟು ಅಗಲ ಇದೆ ಮತ್ತು ರಸ್ತೆ ಇದೆಯಾ ಅಥವಾ ಇಲ್ಲ ಎಂದು ಬರೆದಿರುವುದಿಲ್ಲ ಎಂಧರೆ

ಸಾಕ್ಷಿ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ  ವಾದ ಪತ್ರದ ಹಾತ ನಕಾಶೆಯಲ್ಲಿ ನಮ್ಮ ಊರಿನಿಂದ ನನ್ನ ಜಮಿನಿಗೆ ಯಾವ ದಾರಿಯಿಂದ ಹೋಗುತ್ತೇನೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಮಹಾರಾಷ್ಟ್ರ ರಾಜ್ಯದ ಬಾರ್ಡರಗೆ ಹೊಂದಿಕೊಂಡು ನನ್ನ ಜಮೀನಿಗೆ ಅದಕ್ಕೆ ಹೊಂದಿಕೊಂಡು ಎಲ್ಲಿ ಅನುಕೂಲವಾಗುತ್ತದೆ ಅಲ್ಲಿಂದ ಹೋಗುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಜಮೀನಿಗೆ ಹೋಗಲು ಗುಂಜೋಟಿ ರಸ್ತೆಯನ್ನು ಉಪಯೋಗಿಸುತ್ತೇನೆ ಎಂಧರೆ ಸರಿ. ಹಾತ ನಕಾಶೆಯಲ್ಲಿ ಎ.ಬಿ. ಎಂದು ತೋರಿಸಿದ ಗುರುತು ಏನು ಎಂದು ಕೇಳಿದರೆ ಸಾಕ್ಷಿಯು ಅಬ್ಸಾತ ಡಿಕ್ರಿಯ ಪ್ರಕಾರ ನಾನು ಮೊದಲು ಪ್ರತಿವಾದಿಯರಿಗೆ ಕೊಟ್ಟಿರುವ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಹಾತ ನಕಾಶೆಯಲ್ಲಿ ಕೇಸರಿ ಬಣ್ಣದಿಂದ ತೋರಿಸಿದ ಜಮೀನು ಪ್ರತಿವಾದಿ ನಂ.೧ ಮತ್ತು ೨ ರವರದ್ದು ಇರುತ್ತದೆ. ನನ್ನ ಜಮಿನು ಮತ್ತು ಪ್ರತಿವಾದಿಯರ ಜಮೀನು ಜವಳಗಾ(ಜೆ) ಗ್ರಾಮದ ಸರಹದ್ದಿಯಲ್ಲಿ ಬರುತ್ತದೆ ಎಂದರೆ ಸರಿ. ನನ್ನ ಜಮೀನು ಗುಂಜೋಟಿ ರಸ್ತೆಗೆ ತಾಗಿ ಇರುವುದರಿಂದ ಕಡ್ಡಾಯವಾಗಿ ಪ್ರತಿವಾದಿಯರಿಗೆ ದಾರಿಯನ್ನು ಅವರ ಜಮಿನಿಗೆ ಹೋಗಲು ಕೊಡಬೇಕಾಗುತ್ತದೆ ಎಂದರೆ ಸರಿ ಅಲ್ಲ. ಸುಮಾರು ಕಾಲದಿಂದಲೂ ಪ್ರತಿವಾದಿಯರು ತಮ್ಮ ಜಮೀನಿಗೆ ಹೋಗಲು ಗುಂಜೋಟಿ ರಸ್ತೆಯನ್ನು ಉಪಯೋಗಿಸಿ ನನ್ನ ಜಮೀನಿನ ಮೂಲಕ ಅವರ ಜಮೀನಿಗೆ ಹಾಯ್ದು ಹೋಗುತ್ತಾರೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಬಾರ್ಡರ ರಸ್ತೆಯ ಮೂಲಕ (ಸೀಮೆ ಮೂಲಕ) ಹೋಗುತ್ತಾರೆ ಎಂದು ನುಡಿಯುತ್ತಾರೆ.

ನಮ್ಮ ಮತ್ತು ಪ್ರತಿವಾದಿಯರ ಜಮಿನು ಪೂರ್ವ-ಪಶ್ಚಿಮವಾಗಿ ಇಳಿಜಾರು ಇರುತ್ತವೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಉತ್ತರ-ದಕ್ಷಿಣವಾಗಿವೆ ಎಂದು ನುಡಿಯುತ್ತಾರೆ. ಪಕ್ಕಾ ಒಕ್ಕಲಿಗ ತನ್ನ ಜಮೀನಿಗೆ ಒಡ್ಡನ್ನು ಇಳಿಜಾರು ಪ್ರದೇಶದ ಕಡೆಗೆ ಅಡ್ಡಲಾಗಿ ಹಾಕುತ್ತಾನೆ ಎಂದರೆ ಸರಿ. ಸಾಕ್ಷಿಗೆ ಹಾತ ನಕಾಶೆಯನ್ನು ತೋರಿಸಿ ಇದರಲ್ಲಿ ಸಿ.ಡಿ. ಎಂದು ತೋರಿಸಿದ ಭಾಗ ಅರಣಿ ಇರುತ್ತದೆ ಎಂದರೆ ಸರಿ. ಸದರಿ ಸಿ.ಡಿ. ಎಂದು ತೋರಿಸಿದ ಅರಣಿಯನ್ನು ಅಬ್ಸಾತ ಡಿಕ್ರಿ ಆದ ಮೇಲೆ ಹಾಕಿರುತ್ತೇನೆ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಮೊದಲಿನಿಂದಲೂ ಇದೆ ಎಂದು ನುಡಿಯುತ್ತಾರೆ. ಸಿ.ಡಿ. ಎಂದು ಹಾಕಿದ ಅರಣಿ ಪ್ರತಿವಾದಿಯರಿಗೆ ಇರುವ ಹಾದಿಯ ಹಕ್ಕನ್ನು ಹೊಡೆದು ಹಾಕುವ ಉದ್ದೇಶದಿಂದ ಹಾಕಿರುತ್ತೇನೆ ಎಂಧರೆ ಸರಿ ಅಲ್ಲ. ಬಾರ್ಡರ ಮೂಲಕ ಪ್ರತಿವಾದಿಯರು ಹಾಯ್ದು ತಮ್ಮ ಜಮೀನಿಗೆ ಹೋಗುತ್ತಾರೆ ಎಂದು ತೋರಿಸಲು ನಾನು ಯಾವುದೇ ನಮ್ಮ ರಾಜ್ಯದ ನಕಾಶೆಯಾಗಲಿ ಮಹಾರಾಷ್ಟ್ರ ರಾಜ್ಯದ ನಕಾಶೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಯಾವುದೇ ರಸ್ತೆ ಇರುವುದಿಲ್ಲ ಎಂಧರೆ ಸರಿ ಅಲ್ಲ. ಸದರಿ ಮಹಾರಾಷ್ಟ್ರ ರಾಜ್ಯದ ಬಾರ್ಡರ್ ಬಳಿ ದಾರಿ ಇದೆಯೋ ಅಥವಾ ಇಲ್ಲವೋ ಎಂದು ತಿಳಿಯಲು ಕೋರ್ಟ ಕಮೀಷನರನ್ನು ನೇಮಕ ಮಾಡಲು ನನ್ನದು ಯಾವುದೇ ಕರಾರು ಇರುವುದಿಲ್ಲ.  ಸಾಕ್ಷಿಗೆ ಪ್ರತಿವಾದ ಪತ್ರದ ಹಾತ ನಕಾಶೆಯನ್ನು ತೋರಿಸಿ ಅದರಲ್ಲಿ ಕೆಂಪು ಅಕ್ಷರದಿಂದ ಎಳೆದಿರುವ ಗೀಟುಗಳು ಮಳೆ ನೀರು ಹರಿದು ಹೋಗುವ ಜಾಗ ಇರುತ್ತದೆ ಎಂದರೆ ಸರಿ ಅಲ್ಲ. ಪ್ರತಿವಾದ ಪತ್ರದ ಹಾತ ನಕಾಶೆಯನ್ನು ತೋರಿಸಿ ಅದರಲ್ಲಿ ಎ.ಬಿ.ಸಿ. ಎಂದು ತೋರಿಸಿದ ಜಾಗದಿಂದ ಪ್ರತಿವಾದಿಯರು ತಮ್ಮ ಜಮೀನಿಗೆ ಹೋಗುತ್ತಾರೆ ಎಂಧರೆ ಸರಿ ಅಲ್ಲ.

ಜಮೀನು ಸ.ನಂ. 94 ಮೂಲ ಗುರುಪಾದಪ್ಪ ಸಿದ್ದಪ್ಪ ಅಣ್ಣೂರೆ ಅವರಿಗೆ ಸಂಬಂಧಿಸಿದ ಜಮೀನು ಎಂಧರೆ ಸರಿ. ನಾನು ನನ್ನ ಜಮೀನನ್ನು ಶಿವಶಂಕರ ಪಾಟೀಲರಿಂದ ಖರೀದಿ ಹಿಡಿದಿರುತ್ತೇನೆ. ಶಿವಶಂಕರ

ಪಾಟೀಲರಿಗೆ ಖಜೂರಿ ಗ್ರಾಮದವರು ಮಾರಾಟ ಮಾಡಿರುತ್ತಾರೆ. ಖಜೂರಿ ಗ್ರಾಮದವರು ಗುರುಪಾದಪ್ಪ ಅಣ್ಣೂರೆ ರವರ ಕಡೆಯಿಂದ ಜಮೀನು ಖರೀದಿ ಹಿಡಿದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-೨ರ ಪ್ರಕಾರ ನನ್ನ ಜಮೀನು ಸ.ನಂ. 94, 12 ಎ-02 ಗುಂಟೆ ಇರುತ್ತದೆ ಎಂದರೆ ಸರಿ. 12 ಎ-07 ಗುಂಟೆ ಎಂದು ನಾನು ನನ್ನ ವಾದ ಪತ್ರದಲ್ಲಿ ಬರೆದಿರುವ ವಿಷಯ ಸುಳ್ಳು ಇರುತ್ತದೆ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಮೊದಲು 12 ಎ-07 ಗುಂಟೆ ಇತ್ತು ಈಗ 12 ಎ-02 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಜಮೀನು ಮೊದಲು 12 ಎ-07 ಗುಂಟೆ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು 12 ಎ-07 ಗುಂಟೆ ಜಮೀನಿನ ಮಾಲೀಕನಲ್ಲ ಕೇವಲ 12 ಎ-02 ಗುಂಟೆ ಮಾಲೀಕನಿರುತ್ತೇನೆ ಎಂದರೆ ಸರಿ. ನನ್ನ ಜಮೀನಿಗೆ ಉತ್ತರ ದಿಕ್ಕಿಗೆ ಹೊಂದಿಕೊಂಡು ಮಹಾರಾಷ್ಟ್ರ ರಾಜ್ಯದ ಜಮೀನು ಸ,.ನಂ. 206 ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾವೆಯನ್ನು ಹಾಕಿದ ನಂತರವು ನನ್ನ ಜಮೀನಿಗೆ ಹೊಂದಿಕೊಂಡ ಸದರಿ ಮಹಾರಾಷ್ಟ್ರ ರಾಜ್ಯದ ಜಮೀನು ಸ.ನಂ. ಯಾವುದು ಎಂದು ತಿಳಿಯಲು ಪ್ರಯತ್ನಿಸಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಮಹಾರಾಷ್ಟ್ರ ರಾಜ್ಯದ ಸೀಮೆ ಇದೆ ಎಂದು ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಜಮಿನಿಗೆ ಹೊಂದಿಕೊಂಡ ಮಹಾರಾಷ್ಟ್ರ ರಾಜ್ಯದ ಜಮೀನು ಮತ್ತು ನನ್ನ ಜಮೀನಿನ ನಡುವೆ ಒಂದು ಫೂಟು ಅಗಲ ಬಂದಾರಿ ಇರುವುದಿಲ್ಲ ಎಂದರೆ ಸರಿ ಅಲ್ಲ.

ನನ್ನ ಜಮೀನು ಸ.ನಂ. 94/4 ರಲ್ಲಿ ಉತ್ತರ-ದಕ್ಷಿಣವಾಗಿ ಯಾವುದೇ ಬಂಡು ಇಲ್ಲ ಎಂದರೆ ಸರಿ. ನನ್ನ ಜಮೀನಿಗೆ ಉತ್ತರ-ದಕ್ಷಿಣವಾಗಿ ಎರಡು ಬಂಡುಗಳು ಇರುತ್ತವೆ ಎಂಧರೆ ಸರಿ. ಒಂದು ಗುಂಜೋಟಿ ರಸ್ತೆಗೆ ತಾಗಿ ಇನ್ನೊಂದು ಪ್ರತಿವಾದಿಯ ಜಮೀನಿಗೆ ತಾಗಿ ಇರುತ್ತವೆ ಎಂದರೆ ಸರಿ. ನನ್ನ ಜಮೀನಿನಲ್ಲಿ ಪೂರ್ವ-ಪಶ್ಚಿಮವಾಗಿ ನಾಲ್ಕು ಬಂಡುಗಳು ಇರುತ್ತವೆ. ನಾನು ನನ್ನ ವಾದ ಪತ್ರದ ನಕಾಶೆಯಲ್ಲಿ ಬಂಡುಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಾನು ದಾವೆ ಹಾಕುವ ಸಮಯದಲ್ಲಿ ಸದರಿ ಬಂಡುಗಳು ಇರಲಿಲ್ಲ, ಆದಕಾರಣದಿಂದ ತೋರಿಸಿರುವುದಿಲ್ಲ ಎಂದರೆ ಸರಿ ಅಲ್ಲ. ಸ.ನಂ. 94 ರ ಜಮೀನಿನ ನೀರು ಯಾವತ್ತು ಉತ್ತರ ದಿಕ್ಕಿಗೆ ಹರಿದು ಹೋಗಿರುವುದಿಲ್ಲ ಎಂದರೆ ಸರಿ ಅಲ್ಲ. ಸದರಿ ಉತ್ತರ ದಿಕ್ಕಿಗೆ ಹರಿದು ಹೋದ ನೀರು ಮಹಾರಾಷ್ಟ್ರ ರಾಜ್ಯದ ಬಾರ್ಡರ ಮೇಲೂ ಹೋಗಿರುವುದಿಲ್ಲ ಎಂದರೆ ಸರಿ. ಹಾತ ನಕಾಶೆಯನ್ನು ಸಿ,ಡಿ ಎಂದು ತೋರಿಸಿರುವ ಬಂಡು ಸ.ನಂ.94/2 ಕ್ಕೆ ಪೂರ್ತಿಯಾಗಿ ಉತ್ತರ ದಿಕ್ಕಿಗೆ ಇರುವುದಿಲ್ಲ ಎಂದರೆ ಸರಿ ಅಲ್ಲ. ಸದರಿ ಸಿ.ಡಿ. ಬಂಡನ್ನು ಪ್ರತಿವಾದಿ ಹಾಕಿರುತ್ತಾನೆ ಎಂದರೆ ಸರಿ, ಮೊದಲಿನಿಂದಲೂ ಇತ್ತು ಎಂದು ನುಡಿಯುತ್ತಾರೆ. ಸದರಿ ಅರಣೆ ಪಶ್ಚಿಮ ದಿಕ್ಕಿಗೆ ಮಣ್ಣು ಹರಿದು ಹೋಗಬಾರದು ಎಂದು ಹಾಕಿರುವುದು ಎಂದರೆ ಸರಿ. ಸದರಿ ಸಿ.ಡಿ.ಅರಣೆಯ ಉತ್ತರ ದಿಕ್ಕಿನ ಮೂಲೆಯಲ್ಲಿ ಕೋಡೆ ಇರುತ್ತದೆ ಎಂದರೆ ಸರಿ ಅಲ್ಲ. ಸದರಿ ಉತ್ತರ ದಿಕ್ಕಿನ ಮೂಲೆಯಲ್ಲಿ ಕೋಡಿ ಇರುತ್ತದೆ, ಉದ್ದೇಶಪೂರ್ವಕವಾಗಿ ನಾನು ತೋರಿಸಿರುವುದಿಲ್ಲ ಎಂದರೆ ಸರಿ ಅಲ್ಲ. ಸದರಿ ನಾನು ನನ್ನ ನಕಾಶೆಯಲ್ಲಿ ತೋರಿಸಿದ ಎ.ಬಿ. ರಸ್ತೆಯ ಮೂಲಕ ಬಾಬು ಲೇಂಡೆ ಅನ್ನುವವರು ಹಾಯ್ದು ಹೋಗುತ್ತಿದ್ದರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಮೂಲಕ ದಾವೂದಖಾನ್ ಹಾಯ್ದು ಹೋಗುತ್ತಾನೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿ ಎ.ಬಿ. ರಸ್ತೆಯ ಮೂಕ 'ಬಿ' ಪಾಯಿಂಟಿಗೆ ಬಂದು ನಂತರ ಉತ್ತರ ದಿಕ್ಕಿಗೆ ನಿನ್ನ ಜಮೀನಿನ ಮೂಲಕ ಹಾಯ್ದು ಹೋಗುತ್ತಿದ್ದನಾ ಎಂಧರೆ ಸಾಕ್ಷಿಯು ಬಾಬು ಲೆಂಡೆ ಅವರ ಜಮೀನಿನ ಮೂಲಕ ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

ಸದರಿ ಬಾಬುರಾವ ಲೆಂಡೆ ಜೀವಂತ ಇದ್ದಾರೆ, ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವ ಸಶಕ್ತವನ್ನು ಹೊಂದಿರುತ್ತಾರೆ. ಸದರಿ ಬಾಬುರಾವರವರನ್ನು ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತಿರಾ ಎಂಥರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ನಂ.೧ ಮಾರಾಟ ಮಾಡಲು ತೆಗೆದ ಜಮೀನನ್ನು ತೆಗೆದುಕೊಳ್ಳುವ ಮನಸ್ಸು ನನಗೆ ಇತ್ತು ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೧ ಬೇರೆಯವರಿಗೆ ಜಮೀನನ್ನು ಮಾರಾಟ ಮಾಡಬಾರದೆನ್ನುವ ಉದ್ದೇಶದಿಂದ ಅಪಸಾತ ಡಿಕ್ರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೧ ರವರಿಗೆ ಸದರಿ ಜಮೀನನ್ನು ನನಗೆ ಕೊಡಬೇಕು ಮತ್ತು ಅರ್ಧಬೆಲೆಗೆ ಕೊಡಬೇಕು ಎಂದು ಒತ್ತಡ ಹಾಕಿರುತ್ತೇನೆ ಎಂಥರೆ ಸರಿ ಅಲ್ಲ. ಪ್ರತಿವಾದಿ ನಂ.೩, ೪ ಮತ್ತು ಪ್ರವೀಣ ಅನ್ನುವವರು ನಮ್ಮ ಜಮೀನಿನ ಬಾವಿ ದಂಡೆಯಲ್ಲಿರುವ ಬದುವಿನ ಮೂಲಕ ಹಾಯ್ದು ಹೋಗುತ್ತಾರೆ ಎಂದರೆ ಸರಿ ಅಲ್ಲ. ನಾನು ಶಿವಶಂಕರ ನಾಗಪ್ಪ ಪಾಟೀರವರಿಂದ ಜಮೀನು ಸ.ನಂ. 94/2 ನ್ನು 1976 ರಲ್ಲಿ ಖರೀದಿ ಹಿಡಿರುತ್ತೇನೆ ಎಂಥರೆ ಸರಿ. ಪ್ರತಿವಾದಿ ನಂ.೧ ತನ್ನ ಜಮಿನನ್ನು ಚಿಂಚೋಳಿರವರ ಕಡೆಯಿಂದ ಖರಿದಿ ಮಾಡಿರುತ್ತಾನೆ ಎಂಥರೆ ಸರಿ. ಸದರಿ ಕಲ್ಲಪ್ಪ ಚಿಂಚೋಳೀ 1963 ರಲ್ಲಿ ಗುರುಪಾದಪ್ಪ ತಂದೆ ಸಿದ್ದಪ್ಪ ಅಣ್ಣೂರೆ ರವರ ಕಡೆಯಿಂದ ಖರೀದಿ ಮಾಡಿರುತ್ತಾನೆ ಎಂಥರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಲ್ಲಪ್ಪ ಚಿಂಚೋಳಿ ಮತ್ತು ಗುರುಪಾದಪ್ಪ ಅಣ್ಣೂರೆ ರವರಿಗೆ ಯಾವ ರೀತಿ ವಹಿವಾಟುಗಳು ಇದ್ದವೋ ಅದೇ ರೀತಿ ಪ್ರತಿವಾದಿಯರಿಗೂ ಇರುವುದನ್ನು ನಾನು ಅಲ್ಲಗಳೆಯಲು ಬರುವುದಿಲ್ಲ ಎಂಥರೆ ಸರಿ ಅಲ್ಲ.

ಕಲ್ಲಪ್ಪ ಚಿಂಚೋಳಿರವರ ಮಕ್ಕಳಾದ ನಿಂಗಣ್ಣ ಮತ್ತು ವೀರಣ್ಣರವರು ಪ್ರತಿವಾದಿ ನಂ.೧ ರವರಿಗೆ ತಮ್ಮ ಜಮೀನನ್ನು ಮಾರಾಟ ಮಾಡುವ ಕಾಲದಲ್ಲಿ ನನ್ನ ಜಮೀನಿನ ದಕ್ಷಿಣ ದಿಕ್ಕಿಗೆ ಬಂಡಿ ದಾರಿ ಇದೆ ಎಂದು ಹೇಳಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ.

[ ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು. ]

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.